*ರಘುನಾಥರಾವ್ ತಾಪ್ಸೆ, ದಾವಣಗೆರೆ*
*ಸನ್ಮಾನ ಸಮಾರಂಭಗಳಲ್ಲಿ ಸನ್ಮಾನಿತರಿಗೆ 'ಮೈಸೂರು ಪೇಟ'ವನ್ನು ತೊಡಿಸಲು ಕಾರಣ..?*



ಟೋಪಿ ಹಾಕುವುದರ ಅರ್ಥ ನೇರವಾಗಿ ತಿಳಿದುಬಿಡುವುದರಿಂದ!

*ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.*
*ಇತರರಿಗೆ ವಶೀಕರಣಯಂತ್ರ ಕಟ್ಟಿ ಹಣ ಮಾಡುವವರು ಹಣವಂತರನ್ನು ತಾವೇ ವಶೀಕರಿಸಿಕೊಳ್ಳಬಹುದಲ್ಲ?*

ಆ ಯಂತ್ರ ಕೇವಲ ಕುತಂತ್ರದ ಮಂತ್ರ ಎಂದನಾ ತಂತ್ರಿ.

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*
*ಕುಸುಮ ಎಂದರೆ ಕೆಟ್ಟ ಹೂವು ಎಂದಿರುವಾಗ ಹೆಣ್ಣು ಮಕ್ಕಳಿಗೆ ಆ ಹೆಸರೇಕೆ?*

ಕು – ಭೂಮಿ, ಸು ? ಒಳ್ಳೆಯ ಮಾ – ಲಕ್ಷ್ಮಿ ಎಂದರೆ ಭೂಮಿಯಷ್ಟು ಕ್ಷಮೆ, ಸಿರಿ ಇರುವವಳು; ಕುಸುಮಾ ಕನ್ನಡದಲ್ಲಿ ಕುಸುಮ ಎಂದು ತದ್ಭವವಾಗುವುದು!

*ಪದ್ಮಜಾ ಸುಂದರೇಶ್, ಮೈಸೂರು*
*ಆಗಿನ ಗುರುಕುಲಕ್ಕೂ, ಈಗಿನ ವಸತಿ ಶಾಲೆಗಳಿಗೂ ಇರುವ ವ್ಯತ್ಯಾಸವೇನು?*



ಅಲ್ಲಿ ವಿದ್ಯೆ ದೊರಕುತ್ತಿತ್ತು, ಇಲ್ಲಿ ಸರ್ಟಿಫಿಕೇಟ್ ದೊರಕುತ್ತದೆ!

*ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ*
*ಯಾವ ಹೆಣ್ಣನ್ನೂ ಕಣ್ಣೆತ್ತಿ ನೋಡದ ನನಗೆ ಬಿಎಂಟಿಸಿ ಬಸ್‌ನಲ್ಲಿ ಟಿಕೆಟ್ ಕೇಳಿ ಪಡೆಯಲು ತುಂಬಾ ನಾಚಿಕೆ!?*

ಕತ್ತು ಹಿಡಿದು ದಬ್ಬಿಸಿಕೊಳ್ಳುವ ಅವಮಾನಕ್ಕಿಂತಲೂ ಕತ್ತು ತಗ್ಗಿಸಿಯೇ ಟಿಕೆಟ್ ಪಡೆಯುವುದು ಕ್ಷೇಮ ಸ್ವಾಮಿಗಳೆ!

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಭಕ್ತಿ ಮಾರ್ಗ, ಮುಕ್ತಿ ಮಾರ್ಗ ಇದೆ; ರಾಜಕೀಯ ಮಾರ್ಗ ಯಾವುದು ಸಾರ್?*

ಬತ್ತಿ ಮಾರ್ಗ, (ಕು)ಯುಕ್ತಿ ಮಾರ್ಗ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಜಾಣ ಮೌನ, ಜಾಣ ಕಿವುಡು ಎಂದರೆ...?*

ಒಟ್ಟುಕುಟುಂಬದಲ್ಲಿ ಇರಬೇಕಾದ ಅತ್ತೆ ಸೊಸೆಯರಿಗೆ ಇರಬೇಕಾದ ಗುಣ!

*ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ಪ್ರೇಮಿಗಳನ್ನು ಜೈಲಿನ ಒಂದೇ ಸೆಲ್ಲಿನಲ್ಲಿ ಇರಿಸಿದರೆ...?*

ಕಂಸ ಇದೇ ತಪ್ಪು ಮಾಡಿ ಹೊಡೆತ ತಿಂದದ್ದು!

*ಎಚ್.ಆರ್. ದೇಸಾಯಿ, ರಾಯಚೂರು*
*ಎಲ್ಲಿಯವರೆಗೆ ಓದಿದವನನ್ನು 'ವಿದ್ಯಾವಂತ' ಎನ್ನುತ್ತಾರೆ?*

'ಎನಗಿಂತ ಕಿರಿಯರಿಲ್ಲ' ಎಂಬುದನ್ನು ಅರಿಯುವವರೆಗೆ ಓದಿದವನನ್ನು!

*ಪಿ.ಜೆ. ರಾಘವೇಂದ್ರ, ಮೈಸೂರು*
*ಶಾಸಕರಲ್ಲೂ ಅತೃಪ್ತರು, ಸಂತೃಪ್ತರು, ಅಲ್ಪತೃಪ್ತರು ಎಂಬ ವಿಧಗಳಿರುವುದು ವಿಪರ್ಯಾಸವಲ್ಲವೇ?*

ಕ್ಷಮಿಸಿ, ಅವರಲ್ಲಿ ಅತೃಪ್ತರು ಮಾತ್ರ ಇರುವುದು; 'ಅಲ್ಪತೃಪ್ತರು, ತೃಪ್ತರು ಇದ್ದಾರೆ' ಎಂದರೆ ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿಯಾರು!

*ಗಾಯತ್ರಿ, ರಾಜಾಜಿನಗರ*
*ಪಾರದರ್ಶಕತೆ ಎನ್ನುವರಲ್ಲಾ, ಅದು ನಮ್ಮ ರಾಜ್ಯದ ಮಂತ್ರಿಮಂಡಲದಲ್ಲಿರಬಹುದೆ?*

ಊಹೂಂ. ಅದೇನಿದ್ದರೂ ಚಲನಚಿತ್ರಗಳ ನಟಿಯರ ಉಡುಪಿಗೆ ಸೀಮಿತ!

*ಹಾಡ್ಯ ಜಯಾನಂದ, ಮೈಸೂರು*
*ರಾಜಕಾರಣಿಗಳು ಕೆಲವರಿಗೆ ಅಸಹ್ಯ, ಕೆಲವರಿಗೆ ಅಲರ್ಜಿ, ಕೆಲವರಿಗೆ ಆಪದ್ಬಾಂಧವ. ನಿಮಗೆ?*

ಊಹೆಗೂ ನಿಲುಕದಷ್ಟು ತಿರಸ್ಕಾರ!

*ಆರ್. ಮಧುಸೂದನ್, ಹಾಸನ*
*ತಾಯಿಯ ಕೈತುತ್ತು ತಿಂದು ಬೆಳೆದ ಮಗ ಅದೇ ತಾಯಿಯನ್ನು ವೃದ್ಧಾಶ್ರಮಕ್ಕೆ ದೂಡುತ್ತಾನಲ್ಲ?*

ಹುಚ್ಚಪ್ಪ! ಅದೇ ತಾಯಿಯನ್ನಲ್ಲದೆ ವೃದ್ಧಾಶ್ರಮಕ್ಕೆ ದೂಡಲೆಂದೇ ಮತ್ತೊಂದು ತಾಯಿಯನ್ನು ಹೊಂದಲಾದೀತೆ?

## ಬಹುಮಾನಿತ ಪ್ರಶ್ನೆ

*ಎನ್.ವಿ.ಶ್ರೀನಿವಾಸ್, ಕೋಟೆ ಮೊಹಲ್ಲಾ ಮೈಸೂರು*
*ಪ್ರಾಣಕ್ಕಿಂತ ಮಾನ ದೊಡ್ಡದು ಎನ್ನುತ್ತೇವಲ್ಲಾ, ಇಂದು ಹೋದ ಮಾನ ನಾಳೆ ಸಂಪಾದಿಸಬಹುದು, ಪ್ರಾಣ ಹೋದರೆ?*

ವೆರಿಗುಡ್. ಈ ರೀತಿಯ ಆಲೋಚನೆ ಹೊಂದಿರುವ ನೀವು ರಾಜಕೀಯದಲ್ಲಿದ್ದೀರಾ?

*ಪಿ.ಎನ್. ಶ್ರೀವತ್ಸ, ಬೆಂಗಳೂರು*
*ಒಂದು ವೇಳೆ ಚಲನಚಿತ್ರಗಳೇ ಇಲ್ಲದಿದ್ದರೆ ಏನಾಗುತ್ತಿತ್ತು?*

ರಾಜ್‌ಕುಮಾರ್‌ರನ್ನು ವೀರಪ್ಪನ್ ಕರೆದುಕೊಂಡುಹೋಗುವುದು ತಪ್ಪುತ್ತಿತ್ತು!

*ಟಿ.ಆರ್. ರವೀಂದ್ರ, ಬೆಂಗಳೂರು*
*ನಟರು ಮೈತುಂಬ ಬಟ್ಟೆ ಧರಿಸಿರುವಾಗ ನಟಿಯರು ಟೂಪೀಸ್‌ಗೆ ಮಣೆ ಹಾಕುತ್ತಾರಲ್ಲಾ...?*

ಅಭಿನಯದ ಆಳ ಕಡಿಮೆಯಾದಷ್ಟೂ ಬಟ್ಟೆಗಳ ಅಳತೆ ಕಡಿಮೆಯಾಗುತ್ತದಂತೆ!

*ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ*
*ನೀವು ಮುಖ್ಯಮಂತ್ರಿ ಆದರೆ ಪಾರದರ್ಶಕ, ಭ್ರಷ್ಟಾಚಾರ-ರಹಿತ ಆಡಳಿತ ನೀಡಬಲ್ಲಿರಾ?*

ಅಣ್ಣಾ ಹಜಾರೆ ಉಪಮುಖ್ಯಮಂತ್ರಿ, ಸಂತೋಷ್ ಹೆಗ್ಡೆ ಗೃಹಮಂತ್ರಿ ಆದರೆ ಮಾತ್ರ!

*ಎಂ.ಎನ್. ಸೋಮಶೇಖರ್, ಮೈಸೂರು*
*ಅವತಾರ ಪುರುಷರಾದ ಶ್ರೀರಾಮಚಂದ್ರ ಮತ್ತು ಶ್ರೀಕೃಷ್ಣರಿಗೆ ಗಡ್ಡ ಮೀಸೆಗಳು ಏಕೆ ಬೆಳೆಯಲಿಲ್ಲ?*

ಗಡ್ಡಮೀಸೆಗಳಿದ್ದರೆ ?ಥೂ, ಇದೇನೋ ನಿನ್ನ ಅವತಾರ? ಎಂದು ಗುರುಹಿರಿಯರು ಬೈಯುತ್ತಿದ್ದರೆಂದು!

*ಸವಿರವಿ, ಬಾಳೆಹೊನ್ನೂರು*
*ಜನಸಂಖ್ಯೆ ನಿಯಂತ್ರಿಸಲು ಸರ್ಕಾರ 2 ವರ್ಷ ಯಾರೂ ಮದುವೆಯಾಗಬಾರದೆಂದು ಕಾನೂನು ತಂದರೆ ಹೇಗೆ?*



ಮದುವೆ ಮಾತ್ರ ಆಗಬಾರದು ಎಂದು ಕಾನೂನು ತಂದರೆ ಏನೇನೂ ಪ್ರಯೋಜನವಿಲ್ಲ ಬಿಡಿ!



ರಾಮ್